ದವರು 100 ಪರ್ಸೆಂಟ್ ಬೆಗ್ಯಾಂಟ್ ಕೊಡುವಾಗ ರಾಜ್ಯ ಸರ್ಕಾರದವರು 10 ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಡಲಿಕ್ಕೆ ಎಂದು ಪಂಚಾಯತಿಗಳಿಗೆ ಏತಕ್ಕೆ ಇನ್‌ವೆಸ್ಟ್ ಮಾಡಬೇಕು. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಸ್ವಲ್ಪ ದಯವಿಟ್ಟು ಯೋಚನೆ ಮಾಡಬೇಕು. ಈಗಾಗಲೇ ಸರ್ಕಾರದವರು ರಾಜ್ಯಾದ್ಯಂತ ಏನು ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿದ್ದಾರೆಯೋ ಅವುಗಳನ್ನು ಬಿಟ್ಟು ಉಳಿದವುಗಳನ್ನೂ ಈ ಯೋಜನೆಯಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟರೆ ಈ ಕಾರ್ಯಕ್ರಮ ಚೆನ್ನಾಗಿ ನಡೆಯುತ್ತದೆ.

ಶ್ರೀ ಎಸ್.ಮೈ. ಪಾಟೀಲ್.—ಈಗ 10 ಪರ್ಸೆಂಟ್ ಹಣವನ್ನು ಪಂಚಾಯತಿಗಳು ತುಂಬಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆ ರೀತಿ 10 ಪರ್ಸೆಂಟ್ ತುಂಬದೇ ಇದ್ದರೆ ವಾಟರ್ ಸಪ್ಲೈ ಸ್ಕೀಮು ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ ಇಲ್ಲವೇ?

ಶ್ರೀ ಕಾಗೋಡು ತಿಮ್ಮಪ್ಪ.—ಕೇಂದ್ರಸರ್ಕಾರದ ಆದೇಶ ಏನಿದೆ ಎಂದರೆ ಕುಡಿಯುವ ನೀರಿನ ಅನುಕೂಲತೆಯನ್ನು ಒದಗಿಸಿಕೊಡುವ ಬಗ್ಗೆ ಕೇಂದ್ರ ಸರ್ಕಾರದ ಸ್ಪಷ್ಟವಾದ ನಿರ್ದೇಶನ ಇದೆ. ಇದಕ್ಕಾಗಿ ಕೇಂದ್ರ ಸರ್ಕಾರದವರು ಬೇಕಾದಷ್ಟು ಹಣವನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ; ಕೆಲವು ಕಡೆ ಎಫೆಕ್ಟಿವ್ ವೆರ್‌ಗಳು ಇಲ್ಲ 6 ತಿಂಗಳು ನೀರು ಬರುತ್ತದೆ, 6 ತಿಂಗಳು ನೀರು ಬರುವುದಿಲ್ಲ. ಬಾವಿಗಳು ಒಣಗಿ ಹೋಗುತ್ತವೆ. ಅದಕ್ಕಾಗಿ 12 ತಿಂಗಳೂ ಕೂಡ ನೀರನ್ನು ಕೊಡುವ ಉದ್ದೇಶದಿಂದ ಪ್ರತಿಯೊಂದು ಗ್ರಾಮಮಟ್ಟದಲ್ಲಿಯೂ ಸರ್ವೆ ಮಾಡಿ ಎಲ್ಲಿ ಎಫೆಕ್ಟಿವ್ ವೆರ್‌ಗಳು ಇಲ್ಲ, ಅಂಥಾ ಕಡೆ ಆಡಿಷನರ್ ಕೊಡುವುದಕ್ಕೆ ಸಮಗ್ರವಾದ ಒಂದು ಕುಡಿಯುವ ನೀರಿನ ಬಾವಿಗಳ ಒಂದು ಯೋಜನೆಯನ್ನು ಸಿದ್ಧಪಡಿಸುವುದಕ್ಕೆ ಗ್ರಾಮಾಂತರ ಪ್ರದೇಶಗಳಲ್ಲಿ ವಿಷಯವನ್ನು ಸಂಗ್ರಹಿಸುವುದಕ್ಕೆ ಒಂದು ಕಾರ್ಯಕ್ರಮವನ್ನು ರೂಪಿಸಬೇಕು.

ಶ್ರೀ ಡಿ. ದೇವರಾಜ ಅರಸ್.—ನಾವು ಎನ್ .ಆರ್.ಡಬ್ಲ್ಯೂ ಸ್ಕೀಮಿನಲ್ಲಿ ಏನು ಮಾಡುತ್ತೇವೆ ಎಂದು ಹೇಳಿದ್ದೇವೆ ಎನ್ನುವುದನ್ನು ಬಡ್ಜಟ್ಟನ್ನು ಇನ್ನೊಂದು ಸಾರಿ ದಯವಾಡಿ ನೋಡಿ. 1977-78ನೇ ಸಾಲಿನ ಬಡ್ಜೆಟ್ಟಿನಲ್ಲಿ 6 ಕೋಟಿ ರೂಪಾಯಿಗಳನ್ನು ರೂರಲ್ ವಾಟರ್ ಸಪ್ಲೈ ಸ್ಕೀಮಿಗೆ ಇಟ್ಟಿದ್ದೇವೆ. 5 ಸಾವಿರ ಬೋರ್‌ವೆಲ್‌ಗಳ ಒಂದು ಪ್ರೋಗ್ರಾಮ್ ಹಾಕಿಕೊಂಡಿದ್ದೇವೆ. ಹೋದ ವರ್ಷ ಎನ್‌ಆರ್ ಡಬ್ಲ್ಯೂ ಸ್ಕೀಮಿನಲ್ಲಿ 7 ಸಾವಿರ ಬೋರ್‌ವೆಲ್‌ಗಳನ್ನು ತೆಗೆದಿದ್ದೇವೆ. ನಾವೂ ಸಹ ಈ ಎನ್ ಆರ್ ಡಬ್ಲ್ಯೂ ಸ್ಕೀಮಿಗೆ ಹಣವನ್ನು ಒದಗಿಸಿದ್ದೇವೆ. ಈ ಯೋಜನೆಯನ್ನು ನಡೆಸುತ್ತಿದ್ದೇವೆ ಇದಕ್ಕೆ ಅವರೂ ಕೊಡುವುದಾದರೆ ನಾವು ಒಪ್ಪಿಕೊಳ್ಳುತ್ತೇವೆ. ಇದು ಒಂದು ದೊಡ್ಡ ಯೋಜನೆ ದೊಡ್ಡ ಪ್ರೋಗ್ರಾಮ್ ಎಲ್ಲೆಲ್ಲಿ ಗ್ರಾಮಪಂಚಾಯತಿಗಳು 10 ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಟ್ಟಿದ್ದಾರೆ ಅಲ್ಲೆಲ್ಲಾ ಅದು ಹಾಗೇ ಉಳಿದಿದೆ. ಅವರು 10 ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಟ್ಟು ಕೇಂದ್ರ ಸರ್ಕಾರದವರು ಸಹಾಯ ಮಾಡುವುದಾದರೆ ಆ ಯೋಜನೆಗಳನ್ನು ಬೇಗ ಬೇಗ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಸ್.ಮೈ. ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ ಹಳ್ಳಿಗಳಿಗೆ ನೀರು ಕೊಡಬೇಕಾದರೆ 10 ಪರ್ಸೆಂಟ್ ಕಾಂಟ್ರಿಬ್ಯೂಷನ್ ಪಂಚಾಯತಿಯವರು ಕೊಡಲೇ ಬೇಕೇ ಹೇಗೆ? ಒಂದುವೇಳೆ 10 ಪರ್ಸೆಂಟ್ ಕಾಂಟ್ರಿಬ್ಯೂಷನ್ ಅನ್ನು ಜನಗಳು ತುಂಬುವುದಕ್ಕೆ ಸಾಧ್ಯವಿಲ್ಲದಿದ್ದರೆ ಸರ್ಕಾರದವರೇ ನೀರು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ನಾವು ವಾಟರ್ ಹೈಪ್ ಹಾಕುತ್ತೇವೆ. ಪಂಚಾಯತಿಯವರು 10 ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಡುವುದು ಏತಕ್ಕೆ ಎಂದರೆ ವಾಟರ್ ಟ್ಯಾಂಕ್ ಕಟ್ಟುವುದಕ್ಕೆ ಮತ್ತು ನಲ್ಲಿಹಾಕಿಸುವುದಕ್ಕೆ. ನಾವು ಬೋರವೆಲ್ ಹಾಕಿ ಒಂದು ಊರಿಗೆ ನೀರು ಸಪ್ಲೈ ಮಾಡುವುದು ಮಾಡೋಣ.

Strike by the Employees of the Raichur District of the K.S.R.T.C

ಶ್ರೀ ಎ. ತರಣಪ್ಪ (ರಾಯಚೂರು).—ಸ್ವಾಮಿ ಈಗ ಒಂದು ವಾರದಿಂದ ನಮ್ಮ ರಾಯಚೂರು ಕೆ.ಎಸ್.ಆರ್.ಟಿ.ಸಿ. ಡಿವಿಜನ್‌ನಲ್ಲಿ ಡ್ರೈವರ್ ಮತ್ತು ಕಂಡಕ್ಟರುಗಳು ಸ್ಟ್ರೈಕ್ ಮಾಡುತ್ತಿದ್ದಾರೆ. ಸುಮಾರು 25 ಬಸ್ಸುಗಳು ಒಳ್ಳೆಯ ಕಂಡೀಷನ್‌ನಲ್ಲಿ ಇಲ್ಲ. ಸಿಕ್ ಬಸ್ಸುಗಳೆಲ್ಲಾ ನಿಂತು ಹೋಗಿವೆ.

ಅಧ್ಯಕ್ಷರು —ಮಾನ್ಯ ಸದಸ್ಯರು ಈ ಬಗ್ಗೆ ಕಾರ್ ಅಟೆನ್ಷನ್ ನೋಟೀಸ್ ಕಳುಹಿಸಿದ್ದಾರೆ ಅದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಹೇಳುವುದು ಇದ್ದರೆ ಹೇಳಬಹುದು.

SRI MOHAMMAD A. I.—Madam Speaker, it has not come to me. I will try to find it out and let the House know tomorrow.

Revival of Inam Abolition Enactment

ಶ್ರೀ ಎಂ ಬಿ. ರಾಮಸ್ವಾಮಿ (ಅನೇಕಲ್).—ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ಕೋಚ್, ತಳವಾರರು ಮತ್ತು ನೀರಗಂಟಿಗಳ ಜಮೀನಿನ ಬಗ್ಗೆ ಒಂದು ಹೇಳಿಕೆಯನ್ನು ಮಾಡುತ್ತೇನೆ ಎಂದು ಹೇಳಿದ್ದರು. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿದ್ದಾರೆ. ಹಿಂದೆ 26ನೇ ಡಿಸೆಂಬರ್ 1975ರಲ್ಲಿ ಅರ್ತಿನನ್ಸ್ ತಂದರು. ಮಾನ್ಯ ಮುಖ್ಯ ಮಂತ್ರಿಗಳೂ ಅದನ್ನು ಒಪ್ಪಿಕೊಂಡಿದ್ದಾರೆ. ಇದರ ಬಗ್ಗೆ ಒಂದು ಹೇಳಿಕೆಯನ್ನು ಮಾಡುವುದರ ಜೊತೆಗೆ ಬಿಲ್ಲನ್ನು ಇಂಟರ್‌ಡ್ಯೂಸ್ ಮಾಡಬೇಕು ಏಕೆಂದರೆ ಹರಿಜನ-ಗಿರಿಜನರು ಲಕ್ಷಾಂತರ ರೂಪಾಯಿ ಬೆಲೆಬಾಳುವ ಜಮೀನನ್ನು ಕಳೆದುಕೊಂಡು ಕಷ್ಟದಲ್ಲಿದ್ದಾರೆ. ಇನಾಮ್ ಅಬಾಲಿಷನ್ ಬಿಲ್ ಲ್ಯಾಪ್ಸ್ ಆಗಿದೆ, ಅದನ್ನು ದಯವಾಡಿ ಇಂಟರ್‌ಡ್ಯೂಸ್ ಮಾಡಿಸಿ ಸಹಾಯವಾಗಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Taking up Some Subject

ಶ್ರೀ ಟಿ.ಎಂ ಮಂಜುನಾಥ್.—ನಿನ್ನೆ ಸರ್ಕಾರದವರು ಮಳವಳ್ಳಿ ಸಹಕಾರ ಸಂಘದ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದರು. ಹೋದವಾರ ಶುರು ಮಾಡಿದ್ದಾರೆ.

ಅಧ್ಯಕ್ಷರು —ಈಗ ಸಭೆಯಲ್ಲಿ ಸಂಬಂಧಪಟ್ಟ ಮಿನಿಸ್ಟರ್ ಇಲ್ಲ. ಇವತ್ತು ಹೇಳಿಕೆ ಮಾಡುತ್ತೇನೆಂದು ಹೇಳಿದ್ದರೆ?

ಶ್ರೀ ಟಿ.ಎಂ. ಮಂಜುನಾಥ —ಮಾನ್ಯ ಚನ್ನಬಸಪ್ಪನವರು ಇದ್ದರು, ಇವತ್ತು ಹೇಳಿಕೆ ಕೊಡಿಸುತ್ತೇನೆಂದು ಹೇಳಿದರು. ಓದುವುದಕ್ಕೆ ತಂದಿದ್ದರು ಎಂದು ಕಾಣುತ್ತದೆ.

ಅಧ್ಯಕ್ಷರು.—ಅದರ ಬಗ್ಗೆ ಏನಿದೆಯೋ ನೋಡಿಸಿ, ನಾಳೆ ಒದಿಸುತ್ತೇನೆ.

ಶ್ರೀ ಕೊಣಂದೂರು ಲಿಂಗಪ್ಪ.—ಅಧಿವೇಶನ ಆರಂಭವಾದಾಗ ಮಾನ್ಯ ಪಿ.ಎಲ್. ಪಾಟೀಲರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸದನ ಮುಗಿಯುವುದರೊಳಗೆ ವಿಚಿತವಾದ ನಿರ್ಧಾರಕ್ಕೆ ಬಂದು ಹೇಳುತ್ತೇನೆ ಎಂದು ಹೇಳಿದ್ದರು, ಇನ್ನೂ ಹೇಳಲಿಲ್ಲ. ಆದ್ದರಿಂದ ಯಾವಾಗ ಹೇಳುತ್ತಾರೆಂದು ಸ್ಪಷ್ಟವಾದರೆ ಒಳ್ಳೆಯದು.

ಶ್ರೀ ಡಿ ವೀರಪ್ಪರಾಜ ಅರಸ್.—ಕೆಲವು ದಿವಸಗಳಲ್ಲಿ ಡಿಸಿಷನ್ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್ ಡಿ. ದೇವೇಗೌಡ —ನಮ್ಮ ಸ್ನೇಹಿತರಿಗೆ ನಾಳೆ ನಮ್ಮ ಸದನದ ಕಾರ್ಯಕ್ರಮದ ಬಗ್ಗೆ ವಿಷಯ ಗೊತ್ತಾಗಿಲ್ಲ.

ಅಧ್ಯಕ್ಷರು ಇವತ್ತಿನ ಕೊನೆಯಲ್ಲಿ ನಾಳೆ ಪ್ರೋಗ್ರಾಂ ಏನು ಎನ್ನುವುದನ್ನು ಪ್ರಕಟಿಸಿ ಮಾಡುತ್ತೇನೆ.

Notice of Question of Privilege

re : *News-paper item in Udayavani about K.M.C.*

ಶ್ರೀ ಎಚ್ ಡಿ. ದೇವೇಗೌಡ (ಹೊಳೇನರಸೀಪುರ) — ಮಾನ್ಯ ಸಭಾಧ್ಯಕ್ಷಣಿಯವರೇ ನಾವು ನಿನ್ನೆ ಈ ಸದನದಲ್ಲಿ ಕರ್ನಾಟಕ ಮೆಡಿಕಲ್ ಕಾಲೇಜಿನ ಸಂಬಂಧದಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದೆವು. ಈ ಸದನದ ಕಾರ್ಯಕಲಾಪ ಮುಗಿದ ಮೇಲೆ ದಿನಾಂಕ 12ನೇ ಜುಲೈ